# ಹಿರಿಯ ಸಾಧುಗಳ ದಿವ್ಯ ಸ್ಮೃತಿಗಳು

ಆಂಗ್ಲಮೂಲ: **'ವೇದಾಂತ ಕೇಸರಿ' ಮಾಸಪತ್ರಿಕೆ** ಅನುವಾದ : **ಮಾತಾ ತ್ಯಾಗಮಯೀ**

## ಕಾಯಕವೇ ಪೂಜೆ

**ರಾ**ಮಕೃಷ್ಣ ಮಹಾಸಂಘದ ೯ನೆಯ ಸಂಘ ಗುರುಗಳಾದ ಸ್ವಾಮಿ ಮಾಧವಾನಂದಜಿಯವರು ದೆಹಲಿಯ ರಾಮಕೃಷ್ಣ ಆಶ್ರಮದ ನೂತನ ದೇವಸ್ಥಾನದ ಉದ್ಘಾಟನೆಗೆ ಆಗಮಿಸಿದ್ದರು. ಆಗ ಅವರು ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಸ್ವಾಮಿ ರಂಗನಾಥಾನಂದಜಿಯವರು ಆಗ ದೆಹಲಿ ಆಶ್ರಮದ ಅಧ್ಯಕ್ಷರು. ನಾನು ಅಲ್ಲಿ ಬ್ರಹ್ಮಚಾರಿಯಾಗಿದ್ದೆ. ದೇವಸ್ಥಾನ ಉದ್ಘಾಟನೆಯ ಕಾರ್ಯಕ್ರಮ ಮುಗಿದ ತರುವಾಯ, ಹಿಂದಿನ ವರ್ಷ ತಾನೆ ಸಂನ್ಯಾಸ ಸ್ವೀಕರಿಸಿದ ಸ್ವಾಮಿ ಜಿತಾನಂದರು ಸ್ವಾಮಿ ಮಾಧವಾನಂದಜಿಯವರ ಬಳಿಸಾರಿ, ದೂರುವ ಧ್ವನಿಯಲ್ಲಿ ''ನಾನು ಕಳೆದ ೯ ವರ್ಷಗಳಿಂದ ಆಶ್ರಮ ಕಟ್ಟುವ ಕೆಲಸ ಕಾರ್ಯಗಳಲ್ಲೇ ಮುಳುಗಿಬಿಟ್ಟಿದ್ದೇನೆ. ಈಗ ಮತ್ತೆ ನನ್ನನ್ನು ಬೃಂದಾವನ ಆಶ್ರಮದ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಳುಹಿಸುವ ಮಾತು ನಡೆಯುತ್ತಿದೆ. ಕಳೆದ ೯ ವರ್ಷಗಳಿಂದ ಪ್ರತಿದಿನ ಬೆಳಿಗ್ಗೆ ನಾನು ಕೇವಲ ಒಂದಿಷ್ಟು ಜಪಮಾಡಿ ಇಡೀದಿನ ಕಟ್ಟಡ ನಿರ್ಮಾಣ ಕೆಲಸದಲ್ಲಿ ಮುಳುಗಿಬಿಡಬೇಕಾಯಿತು. ಹೀಗೆ ನನ್ನ ಜೀವನದ ೯ ವರ್ಷಗಳು ವ್ಯರ್ಥವಾಗಿ ಕಳೆದುಹೋದವು. ಆದ್ದರಿಂದ ದಯವಿಟ್ಟು ನನಗೆ ತಪಸ್ಸಿಗೆ ಹೋಗಲು ೨ ವರ್ಷ ರಜೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ'' ಎಂದು ಹೇಳಿದರು. ಸ್ವಾಮಿ ಮಾಧವಾನಂದಜಿಯವರು, ''ನಿನ್ನ ವಿನಂತಿಯನ್ನು ನಡೆಸಿಕೊಡಲಾಗುವುದು. ಆದರೆ ತ್ಯಾಗ ಜೀವನದ ೯ ವರ್ಷಗಳನ್ನು ವ್ಯರ್ಥವಾಗಿ ಕಳೆದೆ ಎಂಬ ನಿನ್ನ ಯೋಚನೆ ಸರಿಯಿಲ್ಲ. ನೀನು ಸಂಘಕ್ಕಾಗಿ ದುಡಿದಿದ್ದೀಯೆ. ಆದ್ದರಿಂದ ಶ್ರೀರಾಮಕೃಷ್ಣರು ಮತ್ತು ಸ್ವಾಮೀಜಿಯವರ ಸೇವೆ ಮಾಡಿದ್ದೀಯೆ. ನಿನ್ನ ಕಠಿಣ ಪರಿಶ್ರಮದ ದಿನಗಳು ವ್ಯರ್ಥವಾಗಿಲ್ಲ, ಬದಲಾಗಿ ಶ್ರೀರಾಮಕೃಷ್ಣರ ಪೂಜೆಯಾಗಿ ಸಂದಿವೆ'' ಎಂದು ಹೇಳಿದರು. ಸಂಘದಲ್ಲಿನ ಕಾರ್ಯವೆಂದರೆ ಶ್ರೀರಾಮಕೃಷ್ಣರ ಪೂಜೆಯೇ ಆಗಿದೆ ಎಂದು ಆ ಕಿರಿಯ ಸಾಧುಗಳಿಗೆ ಮನವರಿಕೆಯಾಯಿತು.

*— ಸ್ವಾಮಿ ಗೌತಮಾನಂದ*

## ಶ್ರೀಮಾತೆಯವರ ಕ್ಷಮೆ

**ಒ**ಂದು ಬಾರಿ ಸ್ವಾಮಿ ಮಾಧವಾನಂದಜಿಯವರೊಡನೆ ಸಂಭಾಷಣೆಯ ನಡುವೆ ಓರ್ವ ಸಾಧುಗಳು, ''ಮಹಾರಾಜ್, ಕೆಲವೊಮ್ಮೆ ನಾವು ತುರ್ತು ಸಂದರ್ಭಗಳಲ್ಲಿ ಮಾಡಬಾರದದನ್ನು ಮಾಡಬೇಕಾಗಿ ಬರುತ್ತದೆ. ಅದನ್ನು ನಾವು ಯಾರೊಂದಿಗೂ ಹೇಳಿಕೊಳ್ಳಲಾಗದು. ನಿಮಗೆ ಅವು ಗೊತ್ತಾದರೆ, ನೀವು ನಮ್ಮನ್ನು ಕ್ಷಮಿಸುವುದಿಲ್ಲ. ಆದರೆ ನನಗೆ ಅವನ್ನು ಸ್ಮರಿಸಿಕೊಂಡು ದುಃಖವಾಗುತ್ತದೆ, ಪ್ರಾಯಶ್ಚಿತ್ತವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನಾವು ಏನು ಮಾಡಬೇಕು?'' ಎಂದು ಪ್ರಶ್ನಿಸಿದರು.

ಸ್ವಾಮಿ ಮಾಧವಾನಂದಜಿಯವರು, ''ಶ್ರೀಮಾತೆಯವರ ದೇವಸ್ಥಾನಕ್ಕೆ ಹೋಗು. ಅವರ ಹತ್ತಿರ ಎಲ್ಲವನ್ನೂ ಹೇಳಿಕೋ. ಅವರಲ್ಲಿ ಕ್ಷಮೆ ಕೇಳು. ಅಮ್ಮಾ – ಇನ್ನೊಂದು ಸಲ ಹೀಗೆ ಮಾಡುವುದಿಲ್ಲ, ಕ್ಷಮಿಸು ಎಂದು ಕೇಳಿಕೋ'' ಎಂದು ಹೇಳಿದರು.

ಆ ಸಾಧುಗಳು ''ನಾನು ಹೀಗೆ ಕೇಳಿಕೊಂಡರೆ, ಶ್ರೀಮಾತೆಯವರು ಕ್ಷಮಿಸುತ್ತಾರೇನು?'' ಎಂದು ಕೇಳಿದರು. ಸ್ವಾಮಿ ಮಾಧವಾನಂದಜಿಯವರು, ''ಅವಳು ಮಕ್ಕಳನ್ನು ಕ್ಷಮಿಸದಿದ್ದರೆ ಏಕೆ ತಾಯಿಯಾಗಿದ್ದಾಳೆ? ಇಲ್ಲದಿದ್ದರೆ ಅವಳು ಮಲತಾಯಿಯಾಗುತ್ತಿದ್ದಳು'' ಎಂದು ಒತ್ತಿ ಹೇಳಿದರು.

*— ಸ್ವಾಮಿ ಮೇಧಸಾನಂದ*

## ವಿಳಾಸ ಬರೆಯುವುದೂ ಧ್ಯಾನ !

**ತ**ಮ್ಮ ಸಂನ್ಯಾಸ ಜೀವನದ ಆರಂಭದ ವರ್ಷಗಳಲ್ಲಿ ಸ್ವಾಮಿ ವೀರೇಶ್ವರಾನಂದಜಿಯವರು ಅದ್ವೈತ ಆಶ್ರಮದಲ್ಲಿದ್ದರು. ಅವರು ಪ್ರತಿದಿನ ನೂರಾರು ಪತ್ರಗಳಿಗೆ ವಿಳಾಸ ಬರೆಯಬೇಕಾಗಿತ್ತು. ಸಾಯಂಕಾಲ ಅವರು ಕಾಲ್ನಡಿಗೆಯಲ್ಲಿ ಅಂಚೆ ಕಛೇರಿಗೆ ಅವನ್ನು ಕೊಟ್ಟು ಬರುತ್ತಿದ್ದರು. ಅವರ ಕೆಲಸ ಯಾಂತ್ರಿಕ ಹಾಗೂ ಶುಷ್ಕವೆನ್ನಿಸಲಾರದೇ ಎಂದು ಪ್ರಶ್ನಿಸಿದಾಗ ಅವರು, ''ಹಾಗೇಕೆ ಅಂದುಕೊಳ್ಳಬೇಕು? ನಮ್ಮ ದೇಶದ ಹೆಚ್ಚಿನ ಊರು ಪಟ್ಟಣಗಳ ಹೆಸರುಗಳು ಭಗವನ್ನಾಮದಿಂದ ಕೂಡಿವೆ. ನಾನು ಪ್ರತಿಸಲ ವಿಳಾಸವನ್ನು ಬರೆಯುವಾಗ ಭಗವಂತನ ನಾಮವನ್ನು ಬರೆಯುತ್ತಿದ್ದೇನೆ ಎಂದು ಭಾವಿಸುತ್ತಿದ್ದೆ'' ಎಂದು ಉತ್ತರಿಸಿದರು.

*—ಸ್ವಾಮಿ ವರಾನಂದ*